ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 23 ನೇ ಸೆಪ್ಟೆಂಬರ್, 2020

ಮುಜರಾಯಿ ದೇವಸ್ಥಾನಗಳ ಅರ್ಚಕರುಗಳ ಜೀವನ ನಿರ್ವಹಣೆ ಕುರಿತು

ಶ್ರೀ ಹೆಚ್.ಎಂ. ರಮೇಶಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) :-

351 (388) ಮಾನ್ಯ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಲಾಕ್‌ಡೌನ್ ಕಾಲದಲ್ಲಿ ಮುಚ್ಚಲ್ಪಟ್ಟ ದೇವಸ್ಥಾನದ ಅರ್ಚಕರುಗಳ ಜೀವನ ನಿರ್ವಹಣೆಗೆ ತೀವ್ರ ಕಷ್ಟ ಪಟ್ಟಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ ;

(ಆ) ಅರ್ಚಕರ ಜೀವನೋಪಾಯಕ್ಕೆ ಶಾಶ್ವತ ಪರಿಹಾರಕ್ಕೆ ಸರ್ಕಾರದ ಯೋಜನೆಗಳಾವುವು ;

(ಇ) ಕಳೆದರೆಡು ವರ್ಷಗಳಿಂದ ಅನುದಾನ ಬಿಡುಗಡೆಯಾಗಿ ಜೀರ್ಣೋದ್ಧಾರಗೊಳ್ಳದೇ ಉಳಿದಿರುವ ದೇವಾಲಯಗಳ ಸಂಖ್ಯೆಯೆಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ದೇವಾಲಯಗಳ ಹುಂಡಿ ಹಣವನ್ನು ಬಳಸಿಕೊಂಡು ಎಷ್ಟು ಸಾಮೂಹಿಕ ವಿವಾಹಗಳಾಗಿವೆ ? (ಸಂಪೂರ್ಣ ವಿವರ ನೀಡುವುದು)